ಬಿತ್ತುವ ಮುಂಚಿನ ಕ್ರಮಗಳಿಂದ ಕಡಲೆಯ ಒಣಬೇರು ರೋಗ ನಿರ್ವಹಣೆ

ಪ್ರಿಯಾ ಬಿ. ದೇಸಾಯಿ ಮತ್ತು ಬಿ. ಎಸ್. ಪಾಟೀಲ
ಕ್ಷೇತ್ರೀಯ ಸಂಶೋಧನಾ ಕೇಂದ್ರ, ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ, ಧಾರವಾಡ – ೫೮೦ ೦೦೫
☎: ೮೭೬೨೨ ೯೩೮೩೯ **ಮಿಂಚಂಚೆ:** priyadesai1318@gmail.com

ಅನೇಕ ಬೆಳೆಗಳಲ್ಲಿ ರೋಗಗಳು ಕಾಣಿಸಿಕೊಂಡಾದ ಮೇಲೆ ಅದಕ್ಕೆ ಪರಿಹಾರ ನಿಯಂತ್ರಣ ಕ್ರಮಗಳಿಗಾಗಿ ತಡಕಾಡುತ್ತೇವೆ. ಕಡಲೆಯಂತಹ ವಾಣಿಜ್ಯ ಬೆಳೆಗೆ ಹಾನಿಕಾರಕವಾಗಿರುವ ಬೇರು ಕೊಳೆ ರೋಗವನ್ನು ಲಕ್ಷಣಗಳು ಕಾಣುವುದಕ್ಕಿಂತ ಮೊದಲೇ ಕೆಲವು ಬೀಜೋಪಚಾರದ ಕ್ರಮಗಳನ್ನು ಅನುಸರಿಸಿದಲ್ಲಿ ಪರಿಣಾಮಕಾರಿಯಾಗಿ ನಿಯಂತ್ರಿಸಬಹುದು. ಉತ್ತರ ಕರ್ನಾಟಕದ ಕೆಲ ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡು ಬರತೊಡಗಿರುವ ಈ ರೋಗದ ಸಮರ್ಥ ನಿರ್ವಹಣೆಯ ಚರ್ಚೆ ಈ ಲೇಖನದಲ್ಲಿದೆ.

ಒಣ ಬೇರು ಕೊಳೆ ರೋಗ ಬಾಧಿತ ಕಡಲೆ ಬೆಳೆ

ಕಡಲೆ ಭಾರತದ ಬಹುಮುಖ್ಯ ದ್ವಿದಳ ಬೆಳೆಯಾಗಿದ್ದು ಪ್ರಸ್ತುತ ೫೦ಕ್ಕಿಂತ ಹೆಚ್ಚು ರಾಷ್ಟ್ರಗಳಲ್ಲಿ ಬೆಳೆಯಲಾಗುತ್ತಿದೆ. ಕಡಲೆ ಬೆಳೆಯು ಜೈವಿಕ ಸಾರಜನಕ ಸ್ಥಿರೀಕರಿಸುವ ಮೂಲಕ ಮಣ್ಣಿನ ಉತ್ಪಾದಕತೆಗೆ ಕೊಡುಗೆ ನೀಡುತ್ತಿದೆ. ಅಭಿವೃದ್ಧಿಶೀಲ ದೇಶದ ಜನರಲ್ಲಿ ಪ್ರೋಟಿನ್ ಅಪೌಷ್ಟಿಕತೆಯನ್ನು ತಡೆಗಟ್ಟಲು ಕಡಲೆಯು ಪ್ರಮುಖ ಹಾಗೂ ಅಗ್ಗದ ಮೂಲವಾಗಿದೆ. ಕಡಲೆ ಬೀಜ ಶೇ.೧೭ ರಿಂದ ೨೪ ರಷ್ಟು ಪ್ರೋಟಿನ್ ಮತ್ತು ಶೇ.೪೦ ರಿಂದ ೫೦.೮೦ ರಷ್ಟು ಕಾರ್ಬೋಹೈಡ್ರೇಟ್‌ಗಳನ್ನು ಹೊಂದಿದೆ. ಈ ಬೆಳೆಯನ್ನು ಹಸಿರುಗೊಬ್ಬರ ತಯಾರಿಕೆಯಲ್ಲಿ ಮತ್ತು ಮಣ್ಣಿನ ಕೊರೆತವನ್ನು ತಡೆಗಟ್ಟಲು ಉಪಯೋಗಿಸಲಾಗುತ್ತಿದೆ. ಹೆಚ್ಚಿನ ಕಡಲೆ ಬಳಕೆ ಹಾಗೂ ಸಸ್ಯಮೂಲದ ಪ್ರೋಟಿನ್‌ಗೆ ಹೆಚ್ಚಿದ ಆದ್ಯತೆಯಿಂದ ಕಡಲೆಯ ಜಾಗತಿಕ ಬೇಡಿಕೆ ಇಮ್ಮಡಿಯಾಗಿದೆ.

ಬೆಳೆಯ ಅವಧಿಯ ಆಧಾರದ ಮೇಲೆ ಕಡಲೆ ಬೇಸಾಯವನ್ನು ಮೂರು ವಿಧವಾಗಿ ವಿಂಗಡಿಸಬಹುದು: ಕಡಿಮೆ ಅವಧಿ (ದಕ್ಷಿಣ ಭಾರತ), ಮಧ್ಯಮಾವಧಿ (ಮಧ್ಯಭಾರತ) ಹಾಗೂ ದೀರ್ಘಾವಧಿ (ಉತ್ತರ ಭಾರತ). ದಕ್ಷಿಣ ಭಾರತದ ರಾಜ್ಯಗಳಾದ ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲಿ ಕಡಲೆಯನ್ನು ಅತಿ ಹೆಚ್ಚಿನ ಪ್ರದೇಶದಲ್ಲಿ ಬೆಳೆಯಲಾಗುತ್ತಿದ್ದು, ಉತ್ಪಾದನೆಯು ಹೆಚ್ಚಿನ ಪ್ರಮಾಣದಲ್ಲಿದೆ. ಇತ್ತೀಚಿನ ವರ್ಷಗಳಲ್ಲಿ ಆಂಧ್ರಪ್ರದೇಶ ಹಾಗೂ ಕರ್ನಾಟಕ ರಾಜ್ಯಗಳಲ್ಲಿ ಕಡಲೆ ಬೆಳೆಯುವ ಪ್ರದೇಶ ಹೆಚ್ಚಾಗುತ್ತಿರುವುದು ಕಂಡುಬಂದಿದೆ.

ಕರ್ನಾಟಕ ರಾಜ್ಯದಲ್ಲಿ ಸರಾಸರಿ ಹೆಕ್ಟೇರುವಾರು ಉತ್ಪಾದನೆಯು (೬೨ ಕಿ. ಗ್ರಾಂ) ದೇಶದ ಉತ್ಪಾದಕತೆಗಿಂತ (೯೬೭ ಕಿ.ಗ್ರಾಂ/ಹೆ.) ಬಹಳ ಕಡಿಮೆಯಾಗಿದೆ. ಇದಕ್ಕೆ ಪ್ರಮುಖ ಕಾರಣ ಕಡಲೆಯನ್ನು ಖುಷ್ಕಿ ಬೆಳೆಯಾಗಿ, ಹಿಂಗಾರಿ ಹಂಗಾಮಿನಲ್ಲಿ ಭೂಮಿಯಲ್ಲಿರುವ ತೇವಾಂಶದ ಆಧಾರದ ಮೇಲೆ ಬೆಳೆಯಲಾಗುತ್ತಿದ್ದು, ಬೆಳೆ ಕಾಳುಗಟ್ಟುವ ಸಮಯದಲ್ಲಿ ತೇವಾಂಶದ ಕೊರತೆ ಹಾಗೂ ಉಷ್ಣತಾಮಾನದ ಒತ್ತಡಕ್ಕೊಳಗಾಗುತ್ತದೆ. ಮಣ್ಣಿನಲ್ಲಿ ತೇವಾಂಶದ ಕೊರತೆ ಹಾಗೂ ಹೆಚ್ಚಿನ ಉಷ್ಣಾತಾಮಾನದಿಂದ ಬೆಳೆಗಳ ಮೇಲೆ ಮಣ್ಣಿನಲ್ಲಿ ಕಂಡುಬರುವ ರೋಗಕಾರಕ ಶಿಲೀಂಧ್ರದ ದುಷ್ಪರಿಣಾಮಗಳು ಹೆಚ್ಚಾಗುತ್ತಿವೆ.

ಸಾಮಾನ್ಯವಾಗಿ ಹವಾಮಾಣ ಬದಲಾವಣೆ ಕೃಷಿ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ. ಈ ಬದಲಾವಣೆಯು ಸಸ್ಯರೋಗಕಾರಕಗಳ ಸಂತಾನೋತ್ಪತ್ತಿ ಹರಡುವಿಕೆ ಮತ್ತು ರೋಗದ ತೀವ್ರತೆಯ ಮೇಲೆ ಪರಿಣಾಮ ಬೀರುತ್ತದೆ. ಈ

ಹಿಂದೆ ಬೆಳೆಯ ಮೇಲೆ ಯಾವುದೇ ದುಷ್ಪರಿಣಾಮ ತೋರದ ಶಿಲೀಂಧ್ರಗಳು ಬದಲಾದ ಹವಾಮಾಣದಲ್ಲಿ ಬೆಳೆಗಳಿಗೆ ಹೆಚ್ಚಿನ ನಷ್ಟ ಉಂಟುಮಾಡಿ ಇಳುವರಿಯನ್ನು ಕುಂಠಿತಗೊಳಿಸುತ್ತಿವೆ. ಉದಾಹರಣೆ, ಇಲ್ಲಿಯವರೆಗೆ ನೆಟೆರೋಗ ಅಥವಾ ಸೊರಗುರೋಗದಿಂದ ಕಡಲೆಯ ಉತ್ಪಾದನೆ ಹೆಚ್ಚಿನ ನಷ್ಟವಾಗುತ್ತಿತ್ತು. ಇತ್ತೀಚೆಗೆ ಬಿಡುಗಡೆಯಾದ ಎಲ್ಲ ಕಡಲೆ ತಳಿಗಳು ಸೊರಗು ನಿರೋದಕ ಶಕ್ತಿ ಹೊಂದಿವೆ. ಇತ್ತೀಚಿನ ಸಮೀಕ್ಷೆಯ ಪ್ರಕಾರ ಉತ್ತರಕರ್ನಾಟಕದಲ್ಲಿ **ಒಣ ಬೇರು ಕೊಳೆತ** ರೋಗದ ತೀವ್ರತೆ ಸೊರಗುರೋಗಕ್ಕಿಂತ ಹೆಚ್ಚಾಗಿದೆ. ಒಣಬೇರು ಕೊಳೆತ ರೋಗದ ತೀವ್ರತೆಯು ಶೇ. ೩೭.೦೬ ರಷ್ಟಿದ್ದು, ಪ್ರಮುಖ ರೋಗವಾದ ಸೊರಗುರೋಗದ ಪ್ರಮಾಣ ಕೇವಲ ಶೇ. ೨೭.೭೦ ರಷ್ಟಿದೆ. ಈ ರೋಗದಿಂದ ವಾರ್ಷಿಕ ಕಡಲೆ ಉತ್ಪಾದನೆಯಲ್ಲಿ ಶೇ. ೫೦ ರಷ್ಟು ಗಣನೀಯ ನಷ್ಟ ಉಂಟಾಗುತ್ತಿದೆ. ಒಣ ಬೇರು ಕೋಳೆ ರೋಗವು ಪ್ರಚಲಿತ ದಿನಗಳಲ್ಲಿ ಉತ್ತರ ಕರ್ನಾಟಕದ ಕಲಬುರ್ಗಿ, ರಾಯಚೂರು, ಧಾರವಾಡ ಮತ್ತು ಬೀದರನಲ್ಲಿ ಹೆಚ್ಚಾಗಿ ಕಾಣಸಿಗುತ್ತದೆ. ಅನಿಯಮಿತ ಮಳೆ ಹಾಗೂ ತಾಪಮಾನ ಏರಿಕೆಯಿಂದ ಈ ರೋಗವು ಕಡಲೆ ಉತ್ಪಾದನೆಯಲ್ಲಿ ಪ್ರಮುಖ ತೊಂದರೆಯಾಗಿ ಕಂಡುಬರುತ್ತಿದೆ.

ಒಣ ಬೇರು ಕೊಳೆರೋಗವು ಸಾಮಾನ್ಯವಾಗಿ ಬೆಳೆಯ ಸಂತಾನೋತ್ಪತ್ತಿ ಹಂತದಲ್ಲಿ ಕಾಣಿಸಿಕೊಳ್ಳುತ್ತದೆ. ಹೂವು ಬಿಡುವ ಹಾಗೂ ಕಾಳುಕಟ್ಟುವ ಹಂತದಲ್ಲಿ ದಿನದ ಉಷ್ಣಾಂಶ ೩೦° ಸೆಂ. ರಷ್ಟಿದ್ದು ಶುಷ್ಕ (ಮಣ್ಣಿನ ತೇವಾಂಶ ಶೇ. ೬೦ ಅಥವಾ ಕಡಿಮೆ) ವಾತಾವರಣ ಇದ್ದರೆ ರೋಗವು ತೀವ್ರವಾಗಿ ಕಾಣಿಸಿಕೊಳ್ಳುತ್ತದೆ. ಪ್ರತಿಕೂಲ ಹಾವಾಮಾಣ ಸ್ಥಿತಿಯಲ್ಲಿ ಈ ರೋಗ ಕಾರಕವು ೧೦ಕ್ಕಿಂತ ಹೆಚ್ಚು ತಿಂಗಳು ಸ್ಕ್ಲೆರೋಶಿಯಾ ರೂಪದಲ್ಲಿ ಭೂಮಿಯಲ್ಲಿ ಬದುಕುತ್ತದೆ/ ಜೀವಿತವಾಗಿರುತ್ತದೆ. ಹಲವು ವರದಿಗಳ ಪ್ರಕಾರ ಈ ರೋಗವು ಕೆಲವು ರಾಸಾಯನಿಕ ಶಿಲೀಂಧ್ರನಾಶಕಗಳಿಗೆ ಪ್ರತಿರೋಧ ಶಕ್ತಿಯನ್ನು ಹೊಂದಿದೆ, ಆದ್ದರಿಂದ ರಾಸಾಯನಿಕ ರೋಗ ನಿಯಂತ್ರಣವು ದೀರ್ಘಕಾಲ ಪರಿಣಾಮಕಾರಿಯಲ್ಲ. ಆದ್ದರಿಂದ ರೋಗ ನಿರೋಧಕ ತಳಿಗಳ ಅಭಿವೃದ್ಧಿ ಪ್ರಮುಖ ಗಮನ ಪಡೆದಿದೆ. ಉತ್ತರ ಕರ್ನಾಟಕದ ಪ್ರಮುಖ ಹಾಗೂ ಹೆಚ್ಚು ಇಳುವರಿ ಕೊಡುವ ತಳಿ ಅಣ್ಣಿಗೇರಿ-೧ ಕೂಡ ಒಣ ಬೇರು ಕೊಳೆರೋಗಕ್ಕೆ ರೋಗ ನಿರೋಧಕತೆ ಹೊಂದಿಲ್ಲ. ಇಲ್ಲಿಯವರೆಗೆ ಒಣ ಬೇರು ಕೊಳೆತ ರೋಗಕ್ಕೆ ನಿರ್ದಿಷ್ಟ ಹಾಗೂ ಸ್ಥಿರ ರೋಗ ನಿರೋಧಕ ಮೂಲವನ್ನು ಹುಡುಕುವಲ್ಲಿ ಅಧ್ಯಯನಗಳು ವಿಫಲವಾಗಿವೆ.

ರೋಗದ ಗುಣಲಕ್ಷಣಗಳು

- ಮೊದಲು ಸಸ್ಯದತುದಿಯು ಭಾಗವು ಬಾಡಿಜೋತುಬಿದ್ದು, ಎಲೆಗಳಲ್ಲಿ ಬಿಳುಚುವಿಕೆ ಕಾಣಬಹುದು.
- ಕ್ರಮೇಣ ಎಲೆಗಳು ಹಳದಿಯಾಗಿ ಒಣಗಿ ಉದುರದೆ ಗಿಡಕ್ಕೆ ಅಂಟಿ ಕೊಂಡಿರುತ್ತದೆ, ಗಿಡಗಳು ಮೇಲಿನಿಂದ ಕೆಳಗಡೆ ಬಾಡುತ್ತದೆ. ಒಣಗಿದ ಗಿಡಗಳು ಒಣಗಿದ ಹುಲ್ಲಿನ ಬಣ್ಣದ್ದಾಗಿರುತ್ತದೆ. ರೋಗಪೀಡಿತ ಸಸ್ಯಗಳ ಅಕಾಲಿಕ ಮರಣವಾಗುತ್ತದೆ.
- ತಾಯಿ ಬೇರು ಕೊಳೆತು, ಕಪ್ಪು ಬಣ್ಣಕ್ಕೆತೀರುಗುತ್ತದೆ. ತಾಯಿ ಬೇರುತಂತು ಬೇರುಗಳು ರಹಿತವಾಗಿರುತ್ತದೆ.
- ಸತ್ತ ಬೇರುಗಳು ಸಾಕಷ್ಟು ಅಸ್ಥಿರವಾಗಿದ್ದು, ಬೇರಿನ ತೋಗಟೆಯು ಸುಲಭವಾಗಿ ಸುಲಿಯುತ್ತದೆ.
- ಒಣಬೇರು ಕೊಳೆ ರೋಗದಿಂದ ಒಣಗಿದ ಗಿಡಗಳು ಕಿತ್ತಿದಾಗ ಸಾಮಾನ್ಯವಾಗಿ ತಾಯಿ ಬೇರು ಭೂಮಿಯಲ್ಲೆ ಉಳಿದುಕೊಳ್ಳುದೆ.
- ಚಿಕ್ಕ ಕಪ್ಪು ಬಣ್ಣದ ಸ್ಕ್ಲಿರೋಶಿಯಾಮ ಕಾಂಡದ ಮೆಲ್ಭಾಗದಲ್ಲಿ ಬಹಿರಂಗವಾಗಿ ಅಥವಾ ಒಳಭಾಗದಲ್ಲಿ ಕಾಣಬಹುದು.
- ಕಾಂಡದ ಕೆಳಗಡೆ ಭಾಗವನ್ನು ಸೀಳಿದಾಗ, ಚಿಕ್ಕದಾದ ಕಪ್ಪು ಬಣ್ಣದ ಸ್ಕ್ಲಿರೋಶಿಯಾ ಕಾಣಬಹುದು.

ನಿರ್ವಹಣೆ

ರೋಗ ನಿರೋಧಕ ತಳಿಗಳನ್ನು ಬೆಳೆಯುವುದು.

- **ಬೀಜೋಪಚಾರ:** ಪ್ರತಿ ಕಿ.ಗ್ರಾಂ ಬೀಜಕ್ಕೆ ೨ ಗ್ರಾಂ

ಟೆಬ್ಯೂಕೊನಾಜೋಲ್, ಕಾರ್ಬಾಕ್ಸಿನ್ + ಥೈರಾಮ್, ಕ್ಯಾಪ್ಟಾನ್, ಥೈರಾಮ್ ಅಥವಾ ಕಾರ್ಬನ್‌ಡೆಜಿಮ್ (ಬಿತ್ತನೆಯ ಬೀಜವನ್ನು ಬಿತ್ತನೆಗೆ ೨ರಿಂದ ೩ ದಿನ ಮೊದಲು ರಾಸಾಯನಿಕ ಶಿಲೀಂಧ್ರನಾಶಕದಿಂದ ಉಪಚರಿಸಬೇಕು). ಅಥವಾ

ಪ್ರತಿ ಕಿ.ಗ್ರಾಂ ಬೀಜಕ್ಕೆ ೪ ಗ್ರಾಂ ಟ್ರೈಕೋಡರ್ಮಾ *ಹಾರ್ಜಿಯಾನಮ್* ಅಥವಾ ಟ್ರೈಕೋಡರ್ಮಾ *ವಿರಿಡೆ* ಜೈವಿಕ ಶಿಲೀಂಧ್ರದಿಂದ ಬೀಜೋಪಚಾರ ಮಾಡಬೇಕು.

ಇದಲ್ಲದೆ, ಒಣ ಬೇರು ಕೊಳೆ ರೋಗದ ಪರಿಣಾಮಕಾರಿ ನಿರ್ವಹಣೆಗೆ ಬಿತ್ತನೆ ಬೀಜಕ್ಕೆ ಟ್ರೈಕೋಡರ್ಮಾ ಜೈವಿಕ ಶಿಲಿಂಧ್ರನಾಶಕವನ್ನು ಪ್ರತಿ ಕಿ.ಗ್ರಾಂ ಬೀಜಕ್ಕೆ ೪ ಗ್ರಾಂ ದಂತೆ ಬೀಜೋಪಚಾರ ಮಾಡಬೇಕು. ಜೊತೆಗೆ ೨ ಗ್ರಾಂ ಟ್ರೈಕೋಡರ್ಮಾ ಪುಡಿಯನ್ನು ೨೫೦ ಕಿ.ಗ್ರಾಂ ಪುಡಿ ಮಾಡಿದ ತಿಪ್ಪೆಗೊಬ್ಬರ ಮತ್ತು ತೇವಾಂಶ ಇರುವಂತೆ ಮಾಡಿ ಪ್ಲಾಸ್ಟಿಕ್ ಹೊದಿಕೆಯಿಂದ ಮುಚ್ಚಿ ಏಳು ದಿವಸದ ವರೆಗೆ ಇಟ್ಟು ಒಂದು ಹೆಕ್ಟೇರ್ ಜಮೀನಿಗೆ ಬಿತ್ತುವ ಸಮಯದಲ್ಲಿ ಉಪಯೋಗಿಸಬಹುದು.

- **ಮುಂಜಾಗ್ರತೆ ಬೇಸಾಯ ಕ್ರಮಗಳು**

ರೋಗ ಬಾಧಿತ ಗಿಡಗಳನ್ನು ಆಗಾಗ ಕಿತ್ತು ಸುಡಬೇಕು. ಬೇಸಿಗೆ ದಿನಗಳಲ್ಲಿ ಆಳವಾಗಿ ಉಳುಮೆ ಮಾಡಬೇಕು. ಮೆಂತೆ ಜೊತೆ ಅಂತರ ಬೆಳೆಯಾಗಿ ಬೆಳೆಯಬಹುದು. ಮಣ್ಣಿನ ಸೌರೀಕರಣ. ಏರುಮಡಿ ವಿಧಾನವನ್ನು ಅಳವಡಿಸಿಕೊಳ್ಳಬೇಕು.

- **ಸರದಿ ಬೆಳೆ** – ಸರದಿ ಬೆಳೆಯಾಗಿ ಏಕದಳ ದಾನ್ಯಗಳನ್ನು ಬೆಳೆಯಬಹುದು. (ಪ್ರಮುಖವಾಗಿ ಜೋಳದ ಜೊತೆ)

ಕ್ಷೇತ್ರೀಯ ಸಂಶೋದನಾ ಕೇಂದ್ರ, ಭಾರತೀಯ ಅನುಸಂದಾನ ಸಂಸ್ಥೆ, ಧಾರವಾಡದಲ್ಲಿ ಒಣ ಬೇರು ಕೊಳೆ ರೋಗದ ನಿರೋಧಕತೆಯ ಪ್ರಾಥಮಿಕ ಅಧ್ಯಯನದಲ್ಲಿ ಕಡಲೆ ತಳಿಗಳಾದ K ೮೫೦, KAK ೨, H–೨೦೮, BG ೧೨–೧೧೯ ಮತ್ತು ICC ೧೪೪೩೫ ಒಣ ಬೇರು ಕೊಳೆರೋಗ ನಿರೋಧಕತೆ ಹೊಂದಿರುವುದು ಕಂಡುಬಂದಿದೆ.

****

ಪ್ರಕಟಣಾ ಕೇಂದ್ರದ ಸ್ನೇಹಿತರ ಬಳಗಕ್ಕೆ ಧನ್ಯವಾದಗಳು



ಪ್ರಿಯ ವಿಜ್ಞಾನಿಗಳೇ ಹಾಗೂ ಓದುಗರೇ,

ನಿಮ್ಮ ನೆಚ್ಚಿನ ಕೃಷಿ ಮುನ್ನಡೆ ಪತ್ರಿಕೆಯು ದಿನದಿಂದ ದಿನಕ್ಕೆ ಜನಪ್ರಿಯವಾಗುತ್ತಿದೆ. ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳ ಲೇಖಕರು ಹಾಗೂ ಹಿತೈಷಿಗಳು ಸದಾ ಪತ್ರಿಕೆಯೊಂದಿಗೆ ಇದ್ದಾರೆ. ಫೋನ್ ಮಾಡಿ ತಮ್ಮ ಅನಿಸಿಕೆ ಅಭಿಪ್ರಾಯ ತಿಳಿಸಿದವರೂ ಅನೇಕರು. ಮಿಗಿಲಾಗಿ ಪತ್ರಿಕೆಯನ್ನು ಮೆಚ್ಚಿ ತಮ್ಮ ಸಂಪರ್ಕಕ್ಕೆ ಬರುವವರನ್ನು ಪತ್ರಿಕೆಯ ಚಂದಾದಾರರನ್ನಾಗಿಯೂ ಮಾಡುತ್ತಿದ್ದಾರೆ. ಅಲ್ಲದೇ ಪ್ರಕಟಣಾ ಕೇಂದ್ರದ ಬಹುತೇಕ ಪ್ರಕಟನೆಗಳು ತುಂಬಾ ಜನಪ್ರಿಯವಾಗಿವೆ. ಬೇಡಿಕೆಗೆ ಅನುಗುಣವಾಗಿ ವಿಶ್ವವಿದ್ಯಾಲಯದ ವಿಜ್ಞಾನಿಗಳು ಪ್ರಕಟಣೆಗಳನ್ನು ತಲುಪಿಸುತ್ತಿದ್ದಾರೆ. ಇತ್ತೀಚೆಗೆ, ವಿಜಯಪುರ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ಕೃಷಿ ವಿಸ್ತರಣಾ ಮುಂದಾಳು ಡಾ. ಎಸ್. ಜಿ. ಅಸ್ಕಿ, ಗದಗ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ವಿಸ್ತರಣಾ ಮುಂದಾಳು ಡಾ. ಸಿ. ಎಂ. ರಫಿ ಹಾಗೂ ಧಾರವಾಡ ಕೃವಿವಿ, ಸಿಬ್ಬಂದಿ ತರಬೇತಿ ಘಟಕದ ಮುಖ್ಯಸ್ಥ ಡಾ. ಎಂ. ಗೋಪಾಲ ಅವರು ಪ್ರಕಟಣಾ ಕೇಂದ್ರದ ಅನೇಕ ಪ್ರಕಟಣೆಗಳನ್ನು ತಮ್ಮ ವ್ಯಾಪ್ತಿಯಲ್ಲಿ ಬರುವ ರೈತರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಮಾರಲು ಸಹಾಯ ಮಾಡಿದ್ದಾರೆ. ಈ ವಿಜ್ಞಾನಿಗಳು ಈ ಮೊದಲೇ ಪ್ರಕಟಣಾ ಕೇಂದ್ರದ ಸ್ನೇಹಿತರ ಬಳಗಕ್ಕೆ ಸೇರ್ಪಡೆಯಾಗಿದ್ದಾರೆ ಎಂದು ತಿಳಿಸಲು ಹರ್ಷಿಸುತ್ತೇವೆ. ಕೇಂದ್ರದ ವತಿಯಿಂದ ಅವರಿಗೆ ಕೃತಜ್ಞತೆಗಳು.

ಬನ್ನಿ, ಪ್ರಕಟಣಾ ಕೇಂದ್ರದ ಸ್ನೇಹಿತರ ಬಳಗಕ್ಕೆ ನೀವೂ ಸೇರ್ಪಡೆಯಾಗಿ.

ವಿವರಗಳಿಗೆ: ದೂರವಾಣಿ: ೦೮೩೬–೨೭೪೪೮೭೪೪ **ಮಿಂಚಂಚೆ: editor@uasd.in**

– *ಸಂಪಾದಕರು*